# ಕಾರಭಾರಿ ಮೊಷನ್ಸ್ ಕೋ ಆಪರೇಟಿವ್ ಫಿಲಂ ಚೇಂಬರ್ ಅಸೋಶಿಯೇಶನ್ಸ್


# ಕಾರಭಾರಿ ಸಿನಿ ಪ್ರೊಡಕ್ಷನ್ ಪ್ರೈವೇಟ್ ಲಿಮಿಟೆಡ್

ಕಾರಭಾರಿ ಚಲನಚಿತ್ರ ನಿರ್ಮಾಣ ಸಂಸ್ಥೆ

ಕೇಂದ್ರ ಕಚೇರಿ : ಕಾರಭಾರಿ ಹೌಸ್, ಅಶೋಕ ರಸ್ತೆ, ಹೆಲ್ತ್ ಕ್ಯಾಂಪ್, ಬೆಟಗೇರಿ ಗದಗ, 582102, ಕರ್ನಾಟಕ / 7760433113 / 8970590204

# THE REVENGE

## ಒಂದು ನಿಗೂಢ ರಹಸ್ಯ




ಕಥೆ / ಚಿತ್ರಕಥೆ / ಸಾಹಿತ್ಯ / ಸಂಭಾಷಣೆ / ಸಂಗೀತ / ನಿರ್ದೇಶನ

## ರಾ ದೇ ಕಾರಭಾರಿ

THE REVENGE
ಒಂದು ನಿಗೂಢ ರಹಸ್ಯ

**ಚಿತ್ರದ ಕುರಿತು**

ರಾ ದೇ ಕಾರಭಾರಿ ಯವರು ರಚಿಸಿದ ಕಥೆ ಆಧಾರಿತ ಚಲನಚಿತ್ರ ದಿ ರಿವೆಂಜ್ ನಮ್ಮ ಸಮಾಜದ ಮದ್ಯ ತೆರೆಮರೆಯಲ್ಲಿರುವ ಅತ್ಯಂತ ಕರಾಳ ಮುಖವನ್ನು ಹೊಂದಿದ ವಿಷಯದ ಆಧಾರವಾಗಿ ರಚಿಸಿದ ಕಥೆ ದಿ ರಿವೆಂಜ್ ಇದೊಂದು ಸಾಮಾಜಿಕ ಕಳಕಳಿಯ ಚಿತ್ರವಾಗಿದ್ದು, ಚಿತ್ರವನ್ನು ಅವಾರ್ಡ್ ನಿಮಿತ್ತ ನಿರ್ಮಾಣ ಮಾಡುತ್ತಿರುವ ಡಾಕುಮೆಂಟರಿ ಚಿತ್ರವಾಗಿದೆ.

**ಚಿತ್ರಕಥೆಯ ಬಗ್ಗೆ**

- ದೇಶದಲ್ಲಿ ಕಂಡೂ ಕಾಣದ ಅತ್ಯಂತ ಭಯಾನಕ ವಿಷಯ ಆಧಾರಿತ ಚಿತ್ರ ದಿ ರಿವೆಂಜ್
- ವಿರೋಧಿಸಬೇಕಾದ ಮಾದ್ಯಮಗಳು ಸಹ ಸದರಿ ವಿಷಯದ ಜಾಹಿರಾತುಗಳನ್ನು ತಮ್ಮ ಮಾದ್ಯಮಗಳಲ್ಲಿ ಅಳವಡಿಸಿಕೊಂಡು ಸಮಾಜದ ದಿಕ್ಕು ತಪ್ಪಿಸುತ್ತಿರುವ ಅತ್ಯಂತ ಕರಾಳ ವಿಷಯ ದಿ ರಿವೆಂಜ್
- ತಪ್ಪು ಅಂತ ಗೊತ್ತಿದ್ದರೂ ಈ ವಿಷಯದತ್ತ ಗಮನವೇ ಹರಿಸದ ರಕ್ಷಣಾ ಇಲಾಖೆ ಮತ್ತು ನಮ್ಮ ಸರಕಾರಕ್ಕೆ ಚಿತ್ರದ ಮೂಲಕ ಒಂದು ಮನವಿಯನ್ನು ಕೊಡುವ ಪ್ರಯತ್ನವೇ ದಿ ರಿವೆಂಜ್
- ಜಾಹಿರಾತಿನ ಜಾಡನ್ನು ಹಿಡಿದು ಹೋಗುವ ಈ ಸಮಾಜದ ಕಾಮುಖರು ಒಂದು ಕಡೆಯಾದರೆ ತನ್ನ ಮಗಳ ಸ್ಥಿತಿಗೆ ಕಾರಣವಾದ ಅಂತಹದ್ದೇ ಜಾಹಿರಾತಿನ ಜಾಡನ್ನು ಹಿಡಿದು ಹೋರಟ ಒಬ್ಬ ಅಪ್ಪನ ಕಾಲ್ಪನಿಕ ಕಥೆ ದಿ ರಿವೆಂಜ್
- ಕಥೆ ಕಾಲ್ಪನಿಕ ಆಗಿರಬಹುದು, ಆದರೆ ದಿ ರಿವೆಂಜ್ ಚಿತ್ರದ ವಿಷಯ ನೂರುಪಾಲು ಸತ್ಯ,
- ದಿ ರಿವೆಂಜ್ ಘಟನೆ ಕಾಲ್ಪನಿಕವಾಗಿರಬಹುದು ಆದರೆ ಇಂತಹ ಘಟನೆ ನಡೆಯಬಹುದು ನಡೆದಿರಲೂಬಹುದು ಎಚ್ಚರಿಕೆಯಿಂದಿರುವುದು ನಮ್ಮ ಕರ್ತವ್ಯ
- ದಿ ರಿವೆಂಜ್ ಕೇವಲ ಭಯಾನಕ ಕಥೆಯಲ್ಲ ಮಗಳಿಗಾಗಿ ಮಿಡಿಯುವ ಅಪ್ಪನ ಕಥೆ, ಮಾನಸಿಕವಾಗಿ ಬಳಲಿ ಹೋದ ಮಗಳು ಒಂದು ಕಡೆಯಾದರೆ ಮಗಳ ಇಂತಹ ಸ್ಥಿತಿಗೆ ಕಾರಣವಾದ ವಿಷಯವನ್ನು ಹುಡುಕುತ್ತ ಪಾಪಿಗಳಿಗೆ ಶಿಕ್ಷೆಗೆ ಗುರಿಪಡಿಸಲು ಹೋರಟ ಅಪ್ಪನ ಪಾಡು ಮತ್ತೊಂದು ಕಡೆ.
- ದುಷ್ಟರ ಜಾಡನ್ನು ಹುಡುಕುತ್ತ ಹೋರಟ ಅಪ್ಪ ಕಂಡುಕೊಂಡಿದ್ದು ಕೆಲವ ತನ್ನ ಒಬ್ಬ ಮಗಳ ಪಾಡಲ್ಲ ಇನ್ನೆಷ್ಟೋ ಮಕ್ಕಳು ಅನುಭವಿಸುತ್ತಿರುವ ಭಯಾನಕ ರೋಧನ ಇದರ ಹಿಂದಿರುವ ಆ ಕರಾಳ ವಿಷಯವನ್ನು ಬಯಲಿಗೆಲೆಯುವುದೇ ದಿ ರಿವೆಂಜ್
- **ದಿ ರಿವೆಂಜ್ ಕೇವಲ ಚಲನಚಿತ್ರವಲ್ಲ ಈ ಸಮಾಜದಲ್ಲಿ ಅಡಗಿರುವ ಒಂದು ಭಯಾನಕ ನಿಘೂಡ ವಿಷಯವನ್ನು ತೆರೆಯ ಮೇಲೆ ತರುವ ಪ್ರಯತ್ನ**
- ದಿ ರಿವೆಂಜ್ ಚಲನಚಿತ್ರದಲ್ಲಿ ಅಪ್ಪನ ಪಾತ್ರಧಾರಿ **Detective** ಪತ್ತೆದಾರ ಆಗಿದ್ದು ಚಿತ್ರವನ್ನು ಸಸ್ಪೆನ್ಸ್ ರೀತಿಯಲ್ಲಿ ಹಾಗೂ ಚಿತ್ರ ವಿಕ್ಷಕರಲ್ಲಿ ಭಯದ ವಾತಾವರಣ ಹುಟ್ಟಿಸಲು ದೆವ್ವದ ಪರಿಕಲ್ಪನೆ ಹಾಗೂ ಮಾಟ ಮಂತ್ರ ತಂತ್ರದ ವಿಷಯಗಳೊಂದಿಗೆ ಚಿತ್ರಿಸಲಾಗುವುದು
- ದಿ ರಿವೆಂಜ್ ಚಲನಚಿತ್ರ ಸಂಪೂರ್ಣ ಕೌಟುಂಬಿಕ ಚಿತ್ರವಾಗಿದ್ದು ಚಿತ್ರದಲ್ಲಿ ಯಾವುದೇ ಅಶ್ಲೀಲ ದೃಶ್ಯಗಳನ್ನು ಅಳವಡಿಸಿಕೊಳ್ಳುವುದಿಲ್ಲ. ಹಾಗೂ ಇಂದಿನ ಮಕ್ಕಳು ನೋಡಲೇಬೇಕಾದ ಚಿತ್ರವಾಗಿ ಚಿತ್ರವನ್ನು ನಿರ್ಮಿಸುವ ಯೋಜನೆಯನ್ನು ಹಾಕಿಕೊಂಡಿದೆ.
- ದಿ ರಿವೆಂಜ್ ಚಿತ್ರದಲ್ಲಿ ಕಾಮುಖ ಸೈಕೋ ಕಲಾವಿಧನೋಬ್ಬನನ್ನು ಖಳನಾಯಕನಾಗಿ ಬಿಂಬಿಸುತ್ತಿದ್ದು ಸದರಿ ವ್ಯಕ್ತಿ ಯಾವುದೇ ಬಾಲಕಿಯರನ್ನು/ಯುವತಿಯರನ್ನು ಅತ್ಯಾಚಾರ, ರೇಪ್ ನಂತಹ ವಿಷಯಗಳನ್ನು ಅಳವಡಿಸಿಕೊಳ್ಳದೆ ಬಾಲಕಿಯರ ಮಾಧಕ ದೇಹದ ಚಿತ್ರವನ್ನು ಬಿಡಿಸುವ ದೃಶ್ಯಗಳನ್ನು ಚಿತ್ರಿಕರಿಸಲಾಗುತ್ತದೆ.
- ದಿ ರಿವೆಂಜ್ ಚಲನಚಿತ್ರ ಅಪ್ರಾಪ್ತ ಹುಡುಗಿಯರ ವಶೀಕರಣ ವಿಷಯವನ್ನು ಪ್ರಮುಖವಾಗಿ ಹೊಂದಿಕೊಂಡಿದೆ

---

PAN INDIA MOVIE

ಕಥೆ / ಚಿತ್ರಕಥೆ / ಸಾಹಿತ್ಯ / ಸಂಭಾಷಣೆ / ಸಂಗೀತ / ನಿರ್ದೇಶನ

**ರಾ ದೇ ಕಾರಭಾರಿ**

THE REVENGE
ಒಂದು ನಿಗೂಢ ರಹಸ್ಯ

# ONE LINE STORY
# ಸಂಕ್ಷಿಪ್ತ ಕಥೆ

ಅದೊಂದು ಭಯಾನಕವಾದ ಸ್ಮಾಶಾನ ಆ ಸ್ಮಶಾನದಲ್ಲಿ ನಡೆಯುತ್ತಿದ್ದ ಮಾಟ ಮಂತ್ರ ತಂತ್ರಗಳೆಂಬ ಮಹಾ ಭಯಾನಕ ಕೃತ್ಯಗಳು ಒಂದು ಕಡೆಯಾದರೆ ದೆವ್ವದ ಮನೆ ಎಂದು ಪ್ರತೀತಿ ಇದ್ದ ರಸ್ತೆ ಪಕ್ಕದಲ್ಲಿರುವ ಒಂದು ಮನೆಯಲ್ಲಿ ಆಗಾಗ ಕೇಳಿ ಬರುವ ಚೆರಾಟದ ಸದ್ದು ಜನರನ್ನು ಭಿತಿಗೊಳಿಸಿದೆ.

ಆಟಿಕೆಯ ಸಾಮಾನು ಮಾರಾಟ ಮಾಡುವ ಒಬ್ಬ ಮಹಿಳೆ ಪ್ರತಿ ಅಮವಾಸ್ಸೆಯ ದಿನ ಅಪ್ರಾಪ್ತ ಹುಡುಗಿಯರನ್ನು ಮರುಳು ಮಾಡಿ ನಿಘೂಡ ರೀತಿಯಲ್ಲಿ ತನ್ನ ಜೊತೆ ಕರೆದುಕೊಂಡು ಹೋಗುತ್ತಾಳೆ, ಮಕ್ಕಳು ಕಾಣೆಯಾದ ಬಗ್ಗೆ ಕೆಲವು ಪಾಲಕರು ಪೋಲೀಸರ ಮೊರೆ ಹೋದರೆ ಇನ್ನೂ ಕೆಲವರು ಪೂಜೆ ಪುನಸ್ಕಾರ ಮಾಟ ಮಂತ್ರದ ಸಹವಾಸಕ್ಕೆ ಇಳಿಯುತ್ತಾರೆ.

ಒಂದು ಕಡೆ ಕಾಣೆಯಾದ ಅಪ್ರಾಪ್ತ ಹುಡುಗಿಯರನ್ನು ಹುಡುಕುವ ಕೆಲಸ ಪೋಲಿಸ್ ಇಲಾಖೆ ಮಾಡುತ್ತಿದ್ದರೆ ಮತ್ತೊಂದು ಕಡೆ ಕಾಣೆಯಾಗುತ್ತಿರುವ ಬಾಲಕಿಯರ ಸಂಖ್ಯೆ ಹೆಚ್ಚುತ್ತಲೇ ಇದೆ.

ದೆವ್ವದ ಮನೆಯಲ್ಲಿ ಆಗಾಗ ಕೇಳಿಬರುವ ಭಯಾನಕ ಶಬ್ದಗಳು ಜನರನ್ನು ಭಿತಿಗೊಳಿಸಿದರೆ ಮತ್ತೊಂದು ಕಡೆ ತಮ್ಮ ಮಕ್ಕಳ ಸುರಕ್ಷತೆಯ ಬಗ್ಗೆ ಪಾಲಕರು ಭಯಭೀತರಾಗಿದ್ದಾರೆ.

ದೆವ್ವದ ಮನೆಯಲ್ಲಿ ಹನ್ನೆರಡು ಮಕ್ಕಳು ಸಿಕ್ಕಿ ಹಾಕಿಕೊಂಡಿದ್ದಾರೆ, ದೆವ್ವ ಆ ಮಕ್ಕಳನ್ನು ಪೀಡಿಸುತ್ತಿದೆ, ವಾರಕ್ಕೆ ಒಂದು ಬಾಲಕಿ ದೆವ್ವದ ಮನೆಯಿಂದ ಕಾಣೆಯಾಗುತ್ತಿರುವುದು ಸಿಕ್ಕಿಹಾಕಿಕೊಂಡ ಬಾಲಕಿಯರಲ್ಲೂ ಆತಂಕ ಮೂಡಿಸಿದೆ, ತಿನ್ನಲೂ ಸಹ ಏನೂ ಇಲ್ಲದೆ ಹತಾಶರಾದ ಬಾಲಕಿಯರು ದೆವ್ವದ ಮನೆಯಲ್ಲಿ ರಾಶಿಗಟ್ಟಲೆ ಬಿದ್ದಿರುವ ಕೊಳೆತ ಹಣ್ಣುಗಳನ್ನು ತಿನ್ನುತ್ತ ಹೊಟ್ಟೆ ಹಸಿವನ್ನು ನಿಗಿಸಿಕೊಳ್ಳುತ್ತ ದೆವ್ವದ ಭೀತಿಯಲ್ಲಿ ಬದುಕುತ್ತಿದ್ದಾರೆ ಕ್ಷಣ ಕ್ಷಣಕ್ಕೂ ದೆವ್ವ ಬಾಲಕಿಯರನ್ನು ಪಿಡಿಸುತ್ತಿದೆ,

ವಾರಕ್ಕೆ ಒಂದು ಬಾಲಕಿಯನ್ನು ಸೈಕೋ ಕಲಾವಿದ ತನ್ನ ವಶಕ್ಕೆ ಪಡೆದು ಬಾಲಕಿಯರನ್ನು ಪಿಡಿಸುತ್ತಾನೆ, ಬಾಲಕಿಯರನ್ನು ಮಾಧಕವಾಗಿ ನಿಲ್ಲಿಸಿ ಅವರ ಚಿತ್ರವನ್ನು ಬಿಡಿಸುತ್ತ ಆನಂದ ಅನುಭವಿಸುತ್ತಾನೆ ಸೈಕೋ ಕಲಾವಿಧ. ಹೀಗೆ ವಾರಪೂರ್ತಿ ಬಾಲಕಿಯರನ್ನು ಕಲ್ಪನಾತ್ಮಕವಾಗಿ ಅನುಭವಿಸುವ ಸೈಕೋ ಕಲಾವಿಧ ವಾರದ ಬಳಿಕ ಆ ಬಾಲಕಿಯರನ್ನು ಮತ್ತೊಂದು ಕೊಠಡಿಯಲ್ಲಿ ಭಂದಿಸುತ್ತಾನೆ.

ಹೀಗೆ ಭಂದಿತರಾದ ಬಾಲಕಿಯರ ಪೈಕಿ ಒಂದು ಹುಡುಗಿ ಹೇಗೋ ಮಾಡಿ ದೆವ್ವದ ಮನೆಯಿಂದ ತಪ್ಪಿಸಿಕೊಳ್ಳುತ್ತಾಳೆ ಆದರೆ ಹೆಣ್ಣು ದೆವ್ವವೊಂದು ಬಾಲಕಿಯನ್ನು ಹಿಂಬಾಲಿಸಿ ಹಿಡಿಯಲು ಪ್ರಯತ್ನ ಪಡುತ್ತದೆ ಆದರೆ ದೆವ್ವದ ಕೈಗೆ ಸಿಗದ ಬಾಲಕಿ ಅಲ್ಲಿಂದ ತಪ್ಪಿಸಿಕೊಂಡು ರಸ್ತೆ ಪಕ್ಕ ಬಿದ್ದುಕೊಳ್ಳುತ್ತಾಳೆ, ಜನಜಂಗುಳಿಯ ರಸ್ತೆ ಬಂದ ತಕ್ಷಣ ಹೆಣ್ಣು ದೆವ್ವ ಅಲ್ಲಿಂದ ಮಾಯವಾಗುತ್ತದೆ ಆದರೆ ದೆವ್ವದ ಭೀತಿಯಲ್ಲಿ ಒಳಗಾದ ಬಾಲಕಿ ತನ್ನ ಸಹಜ ಸ್ಥಿತಿಯನ್ನು ಕಳೆದುಕೊಂಡು ಮಾನಸಿಕವಾಗಿ ಬಳಲುತ್ತಾಳೆ ಅವಳೇ ವಸತಿ ಶಿಕ್ಷಣದಲ್ಲಿ ಓದುತ್ತಿದ್ದ **detective** ನ ಮಗಳು,

ಪತ್ತೇದಾರಿ ಕೆಲಸದ ಮೇಲೆ ಹೋಗಿದ್ದ ಅಪ್ಪ ಮಗಳ ವಿಷಯ ತಿಳಿದು ತುಂಬಾ ನೊಂದುಕೊಳ್ಳುತ್ತಾನೆ ಊರಲ್ಲಿ ಸಾಕಷ್ಟು ಬಾಲಕಿಯರು ಕಾಣೆಯಾದ ಬಗ್ಗೆ ಪೋಲಿಸ್ ಇಲಾಖೆಯಿಂದ ಮಾಹಿತಿ ಪಡೆದು ಪತ್ತೆದಾರ ತನ್ನ ಪತ್ತೆದಾಯಿಕೆಯನ್ನು ಶುರುಮಾಡುತ್ತಾನೆ, ತನ್ನ ಮಗಳಿಗೆ ಇಂತಹ ಸ್ಥಿತಿಗೆ ತಂದವರನ್ನು ಸದೆಬಡೆಯಲು ಮುಂದಾಗುತ್ತಾನೆ,

ಪತ್ತೇದಾರಿ ಕೆಲಸ ಶುರು ಮಾಡಿದ ಪತ್ತೆದಾರನ ಕಣ್ಣಿಗೆ ಒಂದು ವಿಚಿತ್ರ ವಿಷಯದ ಮೇಲೆ ಸಂಶಯ ಬಂದು ಅದರ ಜಾಡನ್ನು ಹಿಡಿದು ಹೋರಟ ಪತ್ತೆದಾರನಿಗೆ ರಹಸ್ಯಮಯ ಸ್ಥಳ ಪತ್ತೆಯಾಗುತ್ತದೆ, ಇದರ ಹಿಂದಿರುವ ರಹಸ್ಯಯನ್ನು ಭೇದಿಸುವ ಪತ್ತೆದಾರ ಎಲ್ಲಾ ಬಾಲಕಿಯರನ್ನು ಉಳಿಸುತ್ತಾನೆ ಹಾಗೂ ಸೈಕೋ ಕಲಾವಿಧ, ಆಟಿಕೆ ವಸ್ತು ಮಾರಾಟದ ಮಹಿಳೆ ಸೇರಿದಂತೆ ಅಪ್ರಾಪ್ತ ಹುಡುಗಿಯರ ವಶೀಕರಣ ಮಾಡುತ್ತಿದ್ದ ಮಾಟಗಾರರನ್ನು ಪೋಲಿಸರಿಗೆ ಒಪ್ಪಿಸುತ್ತ, ದೇಶದಾದ್ಯಂತ ಇರುವ ಇಂತಹ ಮಾಟಗಾರರನ್ನು ಭಂದಿಸಲು ಸರಕಾರದ ಗಮನಕ್ಕೆ ತರುತ್ತಾನೆ.

ಮಾತಗಾರರ ಜಾಹಿರಾತಿಗೆ ಮರುಳಾಗಿ ಕೌಟುಂಬಿಕ ವಶೀಕರಣ ವಿಷಯವಾಗಿ ಮಾತಗಾರರ ಬೆನ್ನು ಹತ್ತಿ ಹೋರಾಟ ಮಹಿಳೆ ತನ್ನ ಶಿಲವನ್ನು ಕಳೆದುಕೊಂಡು ಗಂಡನನ್ನು ಕಳೆದುಕೊಂಡಿರುತ್ತಾಳೆ ಆ ಮಹಿಳೆ ಮಾಟಗಾರರ ಬೆದರಿಕೆಗೆ ಒಳಗಾಗಿ ಅವರೊಂದಿಗೆ ಸೇರಿ ಅಪ್ರಾಪ್ತ ಹುಡುಗಿಯರ ಅಪಹರಣಕ್ಕೆ ಸಹಕರಿಸಿದ್ದು ಸಾಬಿತಾಗುತ್ತದೆ,

ದೆವ್ವದ ಮನೆ ಎಂದು ಸುಳ್ಳು ವದಂತಿ ಹರಡಿಸಿದ್ದ ಮನೆ ಈಗ ನಿರ್ಗತಿಕ ಆಶ್ರಮವಾಗಿ ಬದಲಾಗಿದೆ,

# THE REVENGE

## ಒಂದು ನಿಗೂಢ ರಹಸ್ಯ

KARABHARI MOTIONS
CO-OPERATIVE FILM CHAMBER

ಕಥೆ / ಚಿತ್ರಕಥೆ / ಸಾಹಿತ್ಯ / ಸಂಭಾಷಣೆ / ಸಂಗೀತ / ನಿರ್ದೇಶನ

**ರಾ ದೇ ಕಾರಭಾರಿ**